(ಗೊಂದಲ)

ಅಧ್ಯಕ್ಷರು:– ಈಗ ಸದನವನ್ನು ನಾಳೆ ಬೆಳಿಗ್ಗೆ 11–00 ಗಂಟೆಗೆ ಸೇರುವಂತೆ ಮೂಂದೂಡಲಾಗಿದೆ.

(ಸದನವು ಸಂಜೆ 6 ಗಂಟೆ 31 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ:11 ನೇ ಫೆಬ್ರವರಿ 2015 ರಂದು ಬೆಳಿಗ್ಗೆ 11–00 ಗಂಟೆಗೆ ಸೇರುವಂತೆ ನಿಶ್ಚಯಿಸಿತು)

ನಾಲಾಗಳ ದುರಸ್ಥಿ

1078 (1828); ಶ್ರೀ ಅಬ್ಬಯ್ಯ ಪ್ರಸಾದ್

ಅ) ಹುಬ್ಬಳ್ಳಿ ಧಾರವಾಡ ಪೂರ್ವ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ವಾರ್ಡವಾರು ಇರುವ ರಾಜ ಕಾಲುವೆಗಳು ಹಾಗೂ ಉಪಮುಖ್ಯ ಕಾಲುವೆಗಳು ಯಾವವು? ಅವುಗಳ ಉದ್ದವೆಷ್ಟು? ಪ್ರತ್ಯೆಕವಾಗಿ ಕಾಲುವೆಗಳ ವಿವರ ನೀಡುವುದು.

ಆ) ಆ ಕಾಲುವೆಯನ್ನು ಸರ್ಕಾರ ಯಾವಾಗ ಎಷ್ಟು ಅನುದಾನದಲ್ಲಿ ಅಭಿವೃದ್ಧಿಪಡಿಸಿದೆ. (ಅಭಿವೃದ್ಧಿಪಡಿಸಿರುವ ಕಾಲುವೆಗಳ ಹಾಗೂ ಅನುದಾನದ ವಿವರವನ್ನು ಪ್ರತ್ಯೆಕವಾಗಿ ವಿವರ ನೀಡುವುದು).

ಇ) ಈ ಕಾಲುವೆಗಳು ಅತಿಕ್ರಮಣವಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ತೆರವುಗೊಳಿಸಲು ತೆಗೆದುಕೊಂಡು ಕ್ರಮಗಳೇನು?

ಈ) ಈ ಕಾಲುವೆಗಳಲ್ಲಿ ಮಳೆಗಾಲದ ಸಮಯದಲ್ಲಿ ಅನೇಕ ಅನಾಹುತಗಳು ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಉ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ತೆಗದುಕೊಂಡ ಕ್ರಮಗಳೇನು;

ಊ) ಈ ಎಲ್ಲಾ ನಾಲಾಗಳನ್ನು ಯಾವಾಗ ಅಭಿವೃದ್ಧಿ ಪಡಿಸಲಾಗುವುದು?

ಶ್ರೀ ವಿನಯಕುಮಾರ್ ಸೊರಕೆ (ನಗರಾಭಿವೃದ್ಧಿ ಸಚಿವರು)

ಅ) **ಮತ್ತು** ಆ) ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ವಾರ್ಡವಾರು ಇರುವ ರಾಜ ಕಾಲುವೆಗಳು ಹಾಗೂ ಉಪಮುಖ್ಯ ಕಾಲುವೆಗಳ ಉದ್ದ, ಅಭಿವೃದ್ಧಿಪಡಿಸಿದ ವರ್ಷ ಮತ್ತು ಅನುದಾನದ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಇ) ಸರ್ವೆ ಮಾಡುವ ಸಲುವಾಗಿ ತಹಶೀಲದಾರರಿಗೆ ತಿಳಿಸಲಾಗಿದ್ದು, ಸರ್ವೆ ವರದಿಯನ್ನು ಸ್ವೀಕರಿಸಿದ ನಂತರ ಮುಂದಿನ ಕ್ರಮ ಕೈಗೊಳ್ಳುವುದು.

ಈ) ಗಮನಕ್ಕೆ ಬಂದಿದೆ.

ಉ) **ಮತ್ತು** ಊ) ಹಂತ ಹಂತವಾಗಿ ಅನುದಾನದ ಅವಕಾಶ ಕಲ್ಪಿಸಿಕೊಂಡು ಅಭಿವೃದ್ಧಿ ಪಡಿಸಲಾಗುವುದು.

ಅನುಬಂಧ

ರಾಜ ಕಾಲುವೆಗಳ ವಿವರಗಳು

ಕ್ರಮ ಸಂಖ್ಯೆ	ರಾಜಕಾಲುವೆಯ ಹೆಸರು (ರಸ್ತೆ ಮಾರ್ಗದಲ್ಲಿ)	ವಾರ್ಡ್ ನಂ.	ಉದ್ದ (ಮೀ ಗಳಲ್ಲಿ)	ಅಭಿವೃದ್ಧಿಪಡಿಸಿದ ವರ್ಷ	ಎಷ್ಟು ಅನುದಾನದಲ್ಲಿ ಅಭಿವೃದ್ಧಿ ಪಡಿಸಿದೆ
ವಲಯ ಕಚೇರಿ ನಂ 08					
1	ನೇನಕಾ ಹೋಟೆಲ್, ಗೌಡಿಗಲ್ಲಿ, ನೆಹರು ಮೈದಾನ ಕೊಪ್ಪಿಕರ ರಸ್ತೆಯಿಂದ ಮೇದಾರ ಓಣಿಯವರೆಗೆ	47	1700	ಬಾಗಶಃ ಸುಮಾರು 50ವರ್ಷ ಹಿಂದೆ	-
2	ಸ್ಟೇಷನ್ ರಸ್ತೆಯಿಂದ ಕೋಯಿನ್ ರಸ್ತೆ	51	1000	ಬಾಗಶಃ ಸುಮಾರು 45ವರ್ಷ ಹಿಂದೆ	-
3	ಮಂಟೂರ ರಸ್ತೆಯಿಂದ ಮಿಲ್ಲರ್ಸ್‌ನಗರ ಕೊನೆಯ ರಸ್ತೆವರೆಗೆ	50	1500	ಅಭಿವೃದ್ಧಿಪಡಿಸಿರುವುದಿಲ್ಲ	-
4	ಶಾ ಬಜಾರದಿಂದ ವಿರಾಪೂರ ರೋಡ ಮುಖ್ಯ ರಸ್ತೆ	52	800	ಬಾಗಶಃ ಸುಮಾರು 45ವರ್ಷ ಹಿಂದೆ	-
5	ದುರ್ಗದಬೈಲದಿಂದ ಅಗಸರ ಓಣಿ ಕ್ರಾಸ್ ವರೆಗೆ	52, 56	1000	ಬಾಗಶಃ ಸುಮಾರು 50ವರ್ಷ ಹಿಂದೆ	-
ವಲಯ ಕಚೇರಿ ನಂ 09					
1	ಹರ್ಷಾ ಕಾಂಪ್ಲೆಕ್ಸದಿಂದ ಕಮರಿಪೇಟ ಮುಖಾಂತರ ಚನ್ನಪೇಟ ವರೆಗಿನ ನಾಲಾ	53	2200	ಅಭಿವೃದ್ಧಿಪಡಿಸಿರುವುದಿಲ್ಲ	-
2	ಪಿ ಬಿ ರಸ್ತೆ ವಿಕಾಸನಗರ ವರೆಗಿನ ನಾಲಾ.	45	800	2014-15	18 00ಲಕ್ಷಗಳು
3	ಚನ್ನಪೇಟ ಅಂಬೇಡ್ಕರನಗರದಿಂದ ಮೋಮಿನಪ್ಲಾಟವರೆಗಿನ ನಾಲಾ	44	1000	ಅಬಿವೃದ್ಧಿಪಡಿಸಿರುವುದಿಲ್ಲ	-
ವಲಯ ಕಚೇರಿ ನಂ 10					
1	ಗೋಕುಲ ರಸ್ತೆಯಿಂದ ಎಂ ಟಿ ಎಸ್ ಕಾಲನಿಯವರೆಗೆ	41	2000	ಅಭಿವೃದ್ಧಿಪಡಿಸಿರುವುದಿಲ್ಲ	-
2	ಹೋರವಿಜಕ್ಕಲದಿಂದ ಕಸಬಾಪೇಟ ಬ್ರಿಡ್ಜ್‌ವರೆಗೆ	43	700	ಅಭಿವೃದ್ಧಿಪಡಿಸಿರುವುದಿಲ್ಲ	-
3	ಇಸ್ಲಾಂಪೂರ ಮುಖ್ಯ ರಸ್ತೆಯಿಂದ ಎಸ್ ಎಂ.ಕೃಷ್ಣಾನಗರ ವರೆಗೆ	64	1000	2014-15	20 00ಲಕ್ಷಗಳು
4	ಎಸ್ ಎಂ.ಕೃಷ್ಣಾನಗರ ಬ್ರಿಡ್ಜ್‌ದಿಂದ ಬೈಪಾಸ್ ರಸ್ತೆ ವರೆಗೆ	65	2500	ಅಭಿವೃದ್ಧಿಪಡಿಸಿರುವುದಿಲ್ಲ	-

ವಲಯ ಕಚೇರಿ ನಂ.11					
1	ಹಳೇ ಹುಬ್ಬಳ್ಳಿ ಬ್ರಿಡ್ಜ್‌ದಿಂದ ಇಸ್ಲಾಂಪೂರ ವರೆಗೆ ಕರ್ಕಿ ನಾಲಾ	59	2000	2013-14 ಹಾಗೂ 2014-15	137.00ಲಕ್ಷಗಳು
2	ಮಂಟೂರ ರಸ್ತೆಯಿಂದ ಪಿ.ಬಿ.ರಸ್ತೆಯವರೆಗೆ ಕರ್ಕಿ ನಾಲಾ	67	2000	ಅಭಿವೃದ್ಧಿಪಡಿಸಿರುವುದಿಲ್ಲ	-

ಉಪ ಮುಖ್ಯ ಕಾಲುವೆಗಳ ವಿವರಗಳು:

ಕ್ರಮ ಸಂಖ್ಯೆ	ಉಪ ಮುಖ್ಯ ಕಾಲುವೆಗಳ ಹೆಸರು	ವಾರ್ಡ ನಂ.	ಉದ್ದ (ಮೀ.ಗಳಲ್ಲಿ)	ಅಭಿವೃದ್ಧಿಪಡಿಸಿದ ವರ್ಷ	ಎಷ್ಟು ಅನುದಾನದಲ್ಲಿ ಅಭಿವೃದ್ಧಿ ಪಡಿಸಿದೆ.
ವಲಯ ಕಚೇರಿ ನಂ.10					
1	ಹೊನೂರದಿಂದ ಸಿದ್ದಲಿಂಗೇಶ್ವರ ಕಾಲನಿಯ ವರೆಗೆ	41	1000	2014-15	22.00ಲಕ್ಷಗಳು
2	ದಾಳಂಬರಿಪೇಟೆದಿಂದ ಅಂಬೇಡ್ಕರ ಕಾಲನಿಯ ವರೆಗೆ	43	200	ಅಭಿವೃದ್ಧಿಪಡಿಸಿರುವುದಿಲ್ಲ.	-
3	ಮಾವನೂರ ರಸ್ತೆಯಿಂದ ಎಸ್.ಎಂ. ಕೃಷ್ಣಾನಗರ ಬ್ರಿಡ್ಜ್‌ವರೆಗೆ	65	1200	ಅಭಿವೃದ್ಧಿಪಡಿಸಿರುವುದಿಲ್ಲ	-
ವಲಯ ಕಚೇರಿ ನಂ.11					
1	ಇಂದಿರಾನಗರ	59	1000	2012-13	16.00ಲಕ್ಷಗಳು